Bharti Airtel Foundation

# ಕಾನ್ವೋಕ್ 2026

## ಶಿಕ್ಷಕರು ಮತ್ತು ತರಬೇತಿ ಪಡೆಯುತ್ತಿರುವ ಶಿಕ್ಷಕರಿಗಾಗಿ ರಾಷ್ಟ್ರೀಯ ಸಂಶೋಧನಾ ವಿಚಾರಗೋಷ್ಠಿ

## ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳು

### 1 ಕಾನ್ವೋಕ್ ಒಬ್ಬ ಶಿಕ್ಷಕರಾಗಿ ನಿಮ್ಮನ್ನು ಹೇಗೆ ಸಬಲೀಕರಣಗೊಳಿಸುತ್ತದೆ?

ಕಾನ್ವೋಕ್ ಶಿಕ್ಷಕರಾಗಿ ನಿಮ್ಮ ಸಾಮರ್ಥ್ಯಗಳನ್ನು ಹೆಚ್ಚಿಸಲು ಸಂಶೋಧನೆಯನ್ನು ಒಂದು ಸಾಧನವಾಗಿ ಬಳಸುವುದನ್ನು ಉತ್ತೇಜಿಸುತ್ತದೆ. ಇದು ಸಾಕ್ಷ್ಯಾಧಾರಿತ ಬೋಧನಾ ವಿಧಾನಗಳು ಮತ್ತು ನಿರ್ಧಾರ-ಆಧಾರಿತ ಅಭ್ಯಾಸಗಳನ್ನು ಸಹ ಪ್ರೋತ್ಸಾಹಿಸುತ್ತದೆ

### 2 ಯಾರು ಭಾಗವಹಿಸಬಹುದು?

- ಭಾರತದಾದ್ಯಂತಇರುವ ಶಿಕ್ಷಕರು ಮತ್ತು ಶಿಕ್ಷಣ ತಜ್ಞರು
- ಡಯಟ್ಸ್/ಬಿ.ಎಡ್./ಬಿ.ಎಲ್.ಎಡ್. ಕಾರ್ಯಕ್ರಮಗಳ ಸೇವಾಪೂರ್ವ ಶಿಕ್ಷಕ ತರಬೇತಿದಾರರು

### 3 ವಿವಿಧ ಭಾಷೆಗಳಲ್ಲಿ ಸಲ್ಲಿಕೆಗಳನ್ನು ಮಾಡಲು ಅನುಮತಿ ಇದೆಯೇ?

- ಪ್ರಬಂಧಗಳನ್ನು 22 ಅನುಸೂಚಿತ ಭಾಷೆಗಳಲ್ಲಿ ಯಾವುದಾದರೂ ಒಂದರಲ್ಲಿ ಸಲ್ಲಿಸಬಹುದು
- ಅಂತಿಮ ಪ್ರಸ್ತುತಿಯು ಇಂಗ್ಲಿಷ್/ಹಿಂದಿಯಲ್ಲಿ ಇರಬೇಕು

### 4 ಅರ್ಜಿ ಸಲ್ಲಿಸುವುದು ಹೇಗೆ?

ನೀವು ದ ಟೀಚರ್ ಆ್ಯಪ್ (TheTeacherApp) ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಮತ್ತು ಕಾನ್ವೋಕ್ ಬ್ಯಾನರ್ ಅನ್ನು ಕ್ಲಿಕ್ ಮಾಡುವ ಮೂಲಕ ಅರ್ಜಿ ಸಲ್ಲಿಸಬಹುದು. ಪರ್ಯಾಯವಾಗಿ, ನೀವು ಯಾವುದೇ ಸಾಧನದಲ್ಲಿನ ಯಾವುದೇ ಬ್ರೌಸರ್‌ನಿಂದ ದ theteacherapp.org ಗೆ ಲಾಗ್ ಇನ್ ಮಾಡಬಹುದು

ಆ್ಯಪ್ ಸ್ಟೋರ್ | ಪ್ಲೇ ಸ್ಟೋರ್

### 5 ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಏನನ್ನು ಒಳಗೊಂಡಿರುತ್ತದೆ?

3-ಹಂತದ ಪ್ರಕ್ರಿಯೆ:

- ದ ಟೀಚರ್ ಆ್ಯಪ್ (TheTeacherApp) ನಲ್ಲಿ ನೋಂದಾಯಿಸಿ
- ಆ್ಯಪ್‌ನಲ್ಲಿರುವ ಕಾನ್ವೋಕ್ ಬ್ಯಾನರ್ ಮೇಲೆ ಕ್ಲಿಕ್ ಮಾಡಿ ಮತ್ತು
- convoke@bhartiairtelfoundation.org ಗೆ ಕವರ್ ನೋಟ್‌ನೊಂದಿಗೆ ಪ್ರಬಂಧವನ್ನು ಸಲ್ಲಿಸಿ

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ನವೆಂಬರ್ 2026 | ರಾಷ್ಟ್ರೀಯ ಹಂತ: ಜನವರಿ 2027**

## 6 ವಿಷಯ ವಸ್ತುಗಳು (ಥೀಮ್) ಇವೆಯೇ?

ಶಿಕ್ಷಕರಿಗಾಗಿ ವಿಷಯಗಳು:

- ·ವಿದ್ಯಾರ್ಥಿಗಳ ಸಾಧನೆಯ ಮೇಲೆ ಶಿಕ್ಷಕರ ತರಬೇತಿಯ ಪ್ರಭಾವ (ಟಿಎಲ್ಎಂ, ಎಫ್ಎಲ್ಎನ್, ಬೋಧನಾಶಾಸ್ತ್ರ, ಬೋಧನಾ ತಂತ್ರಗಳು)
- ಎಡ್‌ಟೆಕ್ (ಎಆರ್/ವಿಆರ್/ಎಐ ಪರಿಕರಗಳನ್ನು) ಬಳಸಿಕೊಂಡು ಕಲಿಕೆಯ ಅನುಭವಗಳನ್ನು ಸುಧಾರಿಸುವುದು
- ·ಜೀವನ ಕೌಶಲ ಶಿಕ್ಷಣದ ಮಹತ್ವ ಮತ್ತು ಮಕ್ಕಳ ಬೆಳವಣಿಗೆ ಹಾಗೂ ವಿಕಸನದ ಮೇಲೆ ಅದರ ಪ್ರಭಾವ

**ಸಲ್ಲಿಕೆಗಳು ಪ್ರಾಥಮಿಕ ಹಂತದ ಸಂಶೋಧನೆ ಮತ್ತು ದತ್ತಾಂಶ ಸಂಶೋಧನೆಗಳ ಬೆಂಬಲವನ್ನು ಹೊಂದಿರಬೇಕು**

ತರಬೇತಿ ಪಡೆಯುತ್ತಿರುವ ಶಿಕ್ಷಕರಿಗಾಗಿ ವಿಷಯಗಳು:

- ಭವಿಷ್ಯದ ಶಿಕ್ಷಕರನ್ನು ಸಿದ್ಧಪಡಿಸುವುದು – ತರಬೇತಿ ಹಂತದಲ್ಲಿ ಅಗತ್ಯವಿರುವ ಗಮನ ಮತ್ತು ಉತ್ತೇಜನ
- ಎಡ್‌ಟೆಕ್ (ಎಆರ್/ವಿಆರ್/ತಾಂತ್ರಿಕ ಪರಿಕರಗಳು) ಬಳಸಿಕೊಂಡು ಕಲಿಕೆಯ ಅನುಭವಗಳನ್ನು ಸುಧಾರಿಸುವುದು
- ·ವಿವಿಧ ಬೋಧನಾ ತಂತ್ರಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು

**ಸಲ್ಲಿಕೆಗಳು ಪ್ರಾಥಮಿಕ/ದ್ವಿತೀಯ ಸಂಶೋಧನೆ ಮತ್ತು ದತ್ತಾಂಶ ಸಂಶೋಧನೆಗಳಿಂದ ಬೆಂಬಲಿತವಾಗಿರಬೇಕು**

## 7 ಪ್ರಬಂಧದ ಅವಶ್ಯಕತೆಗಳು:

- 5,000 ಪದಗಳವರೆಗೆ
- ಉಲ್ಲೇಖಗಳು ಮತ್ತು ಉಲ್ಲೇಖಿತ ಆಧಾರಗಳನ್ನು ಹೊಂದಿರಬೇಕು
- ದತ್ತಾಂಶವನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಸಂಗ್ರಹಿಸಲಾಗಿದೆ ಎಂದು ದೃಢೀಕರಿಸುವ ಶಾಲಾ ಮುಖ್ಯಸ್ಥರ ಪತ್ರ (ಪ್ರಾಥಮಿಕ ಸಂಶೋಧನೆ ಸಂದರ್ಭದಲ್ಲಿ)

ಎಐ-ನಿಂದ ರಚಿಸಲಾದ ವಿಷಯ/ಕೃತಿಚೌರ್ಯದ ಆಧಾರದ ಮೇಲೆ ಪ್ರಬಂಧಗಳನ್ನು ಅನರ್ಹಗೊಳಿಸಬಹುದು

## 8 ಸೂಚಿಸಲಾದ ಸ್ವರೂಪ:

ಸಲ್ಲಿಸಲಾದ ಪ್ರಬಂಧಗಳು ಇವುಗಳನ್ನು ಒಳಗೊಂಡಿರಬೇಕು:

- ಪೀಠಿಕೆ/ಉದ್ದೇಶದ ಹೇಳಿಕೆ
- ಸಂಶೋಧನಾ ಪ್ರಶ್ನೆ
- ಸಂಶೋಧನಾ ವಿನ್ಯಾಸ (ಕಾರ್ಯವಿಧಾನ, ಮಾದರಿ, ತನಿಖಾ ಪರಿಕರಗಳು)
- ಸಂಶೋಧನೆಗಳು ಮತ್ತು ವಿಶ್ಲೇಷಣೆ
- ಶಿಫಾರಸುಗಳು ಮತ್ತು ತೀರ್ಮಾನ

## 9 ಪ್ರಕ್ರಿಯೆ:

- ಮೌಲ್ಯಮಾಪನ ಮತ್ತು ಶಾರ್ಟ್‌ಲಿಸ್ಟ್‌ಗಾಗಿ ಪೇಪರ್‌ಗಳನ್ನು ಕಳುಹಿಸಲಾಗುವುದು
- ರಾಜ್ಯದ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಪ್ರಮುಖ ಶಿಕ್ಷಣ ತಜ್ಞರನ್ನು ಒಳಗೊಂಡ ತೀರ್ಪುಗಾರರ ಸಮಿತಿಯ ಮುಂದೆ, ಶಿಕ್ಷಕರು ಮೊದಲ 16 ಅತ್ಯುತ್ತಮ ಪೂರ್ವನಿರ್ಧರಿತ ಅಂಕ ನೀಡುವ ಮಾನದಂಡದ ಆಧಾರದ ಮೇಲೆ ಮಂಡಿಸಲಿದ್ದಾರೆ..
- ·ವಿಜೇತರನ್ನು ರಾಷ್ಟ್ರ ಮಟ್ಟದಲ್ಲಿ ಸನ್ಮಾನಿಸಲಾಗುವುದು

ಅಂಕ ನೀಡುವ ಮಾನದಂಡ ಒಳಗೊಂಡಿದೆ:

ವಿಷಯ ಜ್ಞಾನ, ವಿಧಾನ, ಪುರಾವೆ, ವಿಶ್ಲೇಷಣೆ, ತೀರ್ಮಾನ ಮತ್ತು ಬರವಣಿಗೆಯ ಶೈಲಿ

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ನವೆಂಬರ್ 2026 | ರಾಷ್ಟ್ರೀಯ ಹಂತ: ಜನವರಿ 2027**